ಹೇಗೆಂದು ಚಿಂತೆಗೊಳಗಾದಳು. ಹೆತ್ತ ಮಕ್ಕಳ ಓದಿಗೆ ಗಮನ ಕೊಡದ ತಂದೆಯ ಲೋಕೋದ್ಧಾರ ಬುದ್ಧಿಗೆ ಬೇಸರವಾಯಿತು. “ಅನಂತನಿಗೆ ಹಾಸ್ಟೆಲಲ್ಲಿ ಜಾಗ ಮಾಡ್ಕೊಡಿ; ಎಷ್ಟೆಲ್ಲ ಹುಡ್ಗುರು ಬಾಡಿಗೆ ಖೋಲೀಲಿ ಕೈ ಅಡಿಗೆ ಮಾಡ್ಕಳ್ತಾ ಇಲ್ಲೆ, ಪ್ರಾಯದ ಇಬ್ರು ಹೆಣ್ಮಕ್ಕಳು ನಿಮ್ಗೆ ಇದ್ದೊ, ಮರೆಯಡಿ” ಎಂದು ವಾದಿಸಿದ್ದಕ್ಕೆ ಮಾಸ್ತರು, “ಅಂತು ಮನೇಲಿ ಪುಗ್ಸಟೆ ಎರಡು ವರ್ಷ ಅನ್ನ ಹಾಕಿದ್ದೊ ನನಗೆ. ಧರ್ಮದ ಭಿಕ್ಷೆಗೆ ಇಡ್ತಾ ಇಲ್ಲೆ ಅವನಾ... ಇಷ್ಟೂ ಮಾಡದಿದ್ರೆ...” ಸಲೀಲತ್ತೆಯ ಬಾಯಿ ಮುಚ್ಚಿಸಿದ್ದರು; ಅವಳಿಗೆ ನಾಚಿಕೆಯಾಗುವಂತೆ ವಾರದೊಳಗೆ ಸ್ವತಃ ಅನಂತನ ಅಪ್ಪ ಅವರದೇ ಕಬ್ಬಿನ ಆಲೆಮನೆಯ ಎರಡು ಡಬ್ಬಿ ಬೆಲ್ಲ, ಕಾರುಗದ್ದೆಯಲ್ಲಿ ಬೆಳೆದ ಹೆಸರುಕಾಳು ಮೂಟೆ ಮತ್ತು ಹಸಿರುಪಟ್ಟೆ ಚೀಲದಲ್ಲಿ ಮೆದು ಅನ್ನದ ಜಯಾ ಅಕ್ಕಿ ಮನೆಗೆ ಸಾಗಿಸಿ ಹೋಗಿದ್ದ. ಹೊರಟು ನಿಂತವ, “ಚಲೋ ಆಕಳ ಮಣಕ ಇದ್ದು, ಅತ್ತೆ ನಿಮ್ಮ ಕೊಟ್ಗೇಗೆ ಕಳ್ಸಲಾ” ಎಂದಾಗ ಮತ್ತಷ್ಟು ಮುಜುಗರವಾಗಿ ಆಸೆಯೂ ಆಗಿ ಗಂಡನ ಮುಖ ನೋಡಲಾರದೆ ಸಲೀಲತ್ತೆ ತಾನು ತೀರಾ ಸಣ್ಣ ಮನಸಿನವಳಾದೆ ಎಂದು ಪರಿತಪಿಸಿದಳು. ಅಪ್ಪಿ ಮತ್ತು ಅಕ್ಕು ಕನ್ನಡ ಶಾಲೆ ಮಾಸ್ತರಣಿಯರಾಗುವಷ್ಟು ಇಲ್ಲಾ ನರ್ಸ್ ನೌಕರಿಗೆ ಸೇರುವಷ್ಟಾದರೂ ಕಲಿಯಲಿಲ್ಲವಲ್ಲ ಎಂದು ಖೇದವಾಗುತ್ತಿತ್ತು; ಅವರು ಓದಿನಲ್ಲಿ ಚುರುಕಲ್ಲವೆಂದು ಹಿಂಸೆಯಾಗುತ್ತದೆ; ಒಮ್ಮೊಮ್ಮೆ ಉತ್ಸಾಹದ ರೋಮಾಂಚನದಲ್ಲಿ, “ದತ್ತು ನೀನು ಒಬ್ಬಂವಾದ್ರೂ ಓದಿ ದೊಡ್ಡ ಸಾಹೇಬ ಆಗವು” ಎಂದು ಏರುದನಿಯಲ್ಲಿ ಚಿಮ್ಮಿದ ಕನಸಿಗೆ ಸಂಭ್ರಮಿಸುವಳು. ಮರುಕ್ಷಣ ಗಂಡ ಕಾಯಂ ನೌಕರಿಗೆ ಪ್ರಯತ್ನಿಸಿದ್ದರೆ, ಬಿಸ್ನೆಸ್ ಮಾಡಿದ್ದರೆ ಈ ದರಿದ್ರ ವಕ್ಕರಿಸುತ್ತಿತ್ತೆ ಎಂದು ವಿಷಾದಿಸುತ್ತಾಳೆ. “ಮಗಳ ಮದ್ವೆ ವಿಚಾರ ಇದ್ದಾ ನಿಮ್ಗೆ. ಕರಿಮಣಿ ಸರಕ್ಕಾದ್ರೂ ಬಂಗಾರ ಎಲ್ಲಿಂದ ತಗಂಡು ಬರ್ತಿ” ಹೆಂಡತಿಯ ಮರಗುವಿಕೆಯಲ್ಲಿ ಮೂದಲಿಕೆಯ ಕೊಂಕು ಕೇಳಿದಂತಾಗಿ ಮಾಸ್ತರು ಕೆರಳಿ, “ಕಾಸಿಲ್ಲದಿದ್ರೂ ಒಂದಿನಾರಾ ಉಪಾಸ ಹಾಕಿದ್ನಾ ನಾನು; ದೇವರು ದೊಡ್ಡಂವಿದ್ದ; ಅಂವ ಪಾರು ಮಾಡ್ತಾ, ಖಬರ್ ಇಟ್ಟು ಮಾತಾಡೆ; ದುಡ್ಡು ಗಳಸಿದ್ನಿಲ್ಲೆ ನಿಮ್ಮಪ್ಪ, ನಾಕು ಜನರ ಪ್ರೀತಿ ಸಂಪಾದಿಸಿದಾ” ಮಕ್ಕಳೆದುರು ಮಾಸ್ತರು ಅಳುಬುರುಕು ದನಿಯಲ್ಲಿ ಹೇಳುವಾಗ ಅನಂತನಿಗೆ ಕರುಳಲ್ಲಿ ಏನೊ ಕಳವಳ ಉಮ್ಮಳಿಸುತ್ತಿತ್ತು. ಆಗೆಲ್ಲ ಹಠಾತ್ತಾನೆ ಕವಿದ ಮಳೆಗಾಲದ

